ಕ್ರಾಂತಿಯ ಕಿಡಿ

ಕಾಯಕ ಯೋಗಿ

ಸಂಪಾದಕರು : ಬಿ.ಕೆ. ಅರುಣಜ್ಯೋತಿ

KAYAKAYOGI - Morning Daily

ಕನ್ನಡ ದಿನಪತ್ರಿಕೆ

ಮಂಡ್ಯ Mandya	ಸಂಪುಟ - 04 Volume - 04	ಸಂಚಿಕೆ - 101 Issue - 101	RNI No.KARKAN/2018/77805 POST NO. KA/SK/MND/999/2019-2021	ಮಂಗಳವಾರ Tuesday	27-07-2021	ಪುಟ - 04 Page - 04	ಬೆಲೆ-ರೂ. 02 Price - 02	ಸಂಪರ್ಕ 9980605484	E-mail kayakayoginews@gmail.com

ask ಮೈಸೂರು

ಪರಿಸರ, ಪ್ರವಾಸೋದ್ಯಮ, ಆರೋಗ್ಯ, ವ್ಯವಹಾರ, ಕೃಷಿ, ಶಿಕ್ಷಣ, ಜೀವನ ಶೈಲಿ, ಸಂಸ್ಕೃತಿ, ವನ್ಯಜೀವಿಗಳು, ಸಾಧಕರು, ವ್ಯವಹಾರ ಹಾಗೂ ಉತ್ಪನ್ನಗಳ ಮಾಹಿತಿ, ಸುದ್ದಿ ಮತ್ತು ಜಾಹಿರಾತುಗಳು.

FREE CLASSIFIEDS

Visit: askmysuru.com/news

9742 9742 34 askmysuru

ಬಿಎಸ್‌ವೈ ವಿದಾಯ

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ

ಬೆಂಗಳೂರು : ಕೇಂದ್ರ ಬಿಜೆಪಿ ವರಿಷ್ಠರು ಯಾರನ್ನೂ ಬೇಕಾದರೂ ಮುಖ್ಯಮಂತ್ರಿ ಮಾಡಲಿ. ನಾನು ಇಂಥವರನ್ನೇ ಮಾಡಬೇಕೆಂದು ಶಿಫಾರಸ್ಸು ಮಾಡುವುದಿಲ್ಲ ಎಂದು ನಿರ್ಗಮಿತ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಸ್ಪಷ್ಟಪಡಿಸಿದ್ದಾರೆ. ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ರಾಜಭವನದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರಿಷ್ಠರು ತಮಗೆ ಬೇಕಾದವರನ್ನೇ ಮುಖ್ಯಮಂತ್ರಿ ಮಾಡಲಿ ನನ್ನದೇನೂ ಅಭ್ಯಂತರವಿಲ್ಲ. ನಾನು ಇಂಥವರನ್ನೇ ಸಿಎಂ ಮಾಡಿ ಎಂದು ಮನವಿ ಕೂಡ ಮಾಡುವುದಿಲ್ಲ. ಅವರ ನಿರ್ಧಾರಕ್ಕೆ ನಾನು ಬದ್ಧ ಎಂದರು.

ಯಾರೇ ಸಿಎಂ ಆದರೂ ಸಹ ನಾನು ಅವರಿಗೆ ಸಂಪೂರ್ಣವಾದ ಸಹಕಾರ, ಸಹಾಯವನ್ನು ನೀಡುತ್ತೇನೆ. ಪಕ್ಷದಲ್ಲಾಗಲಿ ಅಥವಾ ಸರ್ಕಾರದಲ್ಲಿ ಯಾವುದೇ ರೀ ತಿಯ ಗೊಂದಲಕ್ಕೆ ಅವಕಾಶ ಕೊ ಡುವುದಿಲ್ಲ. ಸಂಪೂರ್ಣ ಸಹಕಾರ ನನ್ನಿಂದ ಸಿಗಲಿದೆ ಎಂದು ಹೇಳಿ ದರು. ಒಂದು ವೇಳೆ ಕೇಂದ್ರ ವರಿ ಷ್ಠರು ನಿಮಗೆ ರಾಜ್ಯಪಾಲರ ಹುದ್ದೆ ನೀಡಿದರೆ ಒಪ್ಪಿಕೊಳ್ಳುತ್ತೀರ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಲು ಸಿಎಂ ನಿರಾಕರಿಸಿದರು.

ನಾನು ಪಕ್ಷದ ಕಾರ್ಯಕರ್ತರಿಗಾಗಲಿ, ರಾಜ್ಯ ಜನತೆಗಾಗಗಲಿ ಸ್ಪಷ್ಟಪಡಿಸುವುದೇನೆಂದರೆ ಈಗಲೂ ಕೂಡ ನಾನು ಸಕ್ರಿಯರ ರಾಜಕಾರಣದಲ್ಲಿ ಮುಂದುವರೆಯುತ್ತೇನೆ.ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಪಕ್ಷವನ್ನು ಸಂಘಟಿಸಿ ಅಧಿಕಾರಕ್ಕೆ ತರುವುದು ನನ್ನ ಮುಂದಿನ ಗುರಿ ಎಂದು ಹೇಳಿದರು. ನನ್ನ ಪರವಾಗಿ ನಮ್ಮ ಮನೆಗೆ ಬಂದು ನಾಡಿನ ನೂರಾರು ಮಠಾಧೀಶರು ಬೆಂಬಲ ಸೂಚಿಸಿದ್ದಾರೆ. ರಾಜ್ಯದ ಇತಿಹಾಸದಲ್ಲಿ ಇಂತಹ ಅದೃಷ್ಟ ಯಾರಿಗೂ ಸಿಗುವುದಿಲ್ಲ. ನನ್ನ ಪರವಾಗಿ ಬೆಂಬಲ ಸೂಚಿಸಿದ ಎಲ್ಲರಿಗೂ ಕೃತಜ್ಞತೆಗಳು. ನಿಮ್ಮ ಸಹಾಯವನ್ನು ಎಂದಿಗೂ ಮರೆಯುವುದಿಲ್ಲ ಎಂದರು.

ನಾನು ಬಲವಂತವಾಗಿ ಇಲ್ಲವೇ ಕೇಂದ್ರ ವರಿಷ್ಠರ ಒತ್ತಡಕ್ಕೆ ಮಣಿದು ರಾಜೀನಾಮೆ ಕೊಟ್ಟಿಲ್ಲ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಷಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಯಾರೂ ಕೂಡ ನನ್ನ ಮೇಲೆ ಒತ್ತಡ ಹೇರಿಲ್ಲ. ಸ್ವಯಂಪ್ರೇರಿತನಾಗಿ ನಾನೇ ರಾಜೀನಾಮೆ ಕೊಟ್ಟಿದ್ದೇನೆ ಎಂದು ಹೇಳಿದರು.

ಬಿಜೆಪಿಯಲ್ಲಿ ಸಾಮಾನ್ಯವಾಗಿ 75 ವರ್ಷ ದಾಟಿದವರಿಗೆ ಅಧಿಕಾರವನ್ನು ಕೊಟ್ಟಿರಲಿಲ್ಲ. ಅದನ್ನು ಮೀರಿ ನನಗೆ ಎರಡು ವರ್ಷ ಆಡಳಿತ ನಡೆಸಲು ಅವಕಾಶ ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಪಕ್ಷದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ.

ನನ್ನನ್ನು ಈ ಸ್ಥಾನದ ವರೆಗೂ ಬೆಳೆಸಿದ ಕಾರ್ಯಕರ್ತರಿಗೆ ಭಾವುಕರಾಗಿ ನುಡಿದರು.

ಕನ್ನಂಬಾಡಿಗೆ ದೃಷ್ಠಿ ನಿವಾರಣೆ

ಬೃಂದಾವನದಲ್ಲಿ ಹೋಮಕುಂಡ ಸ್ಥಾಪನೆ ಜೆಡಿಎಸ್ ಶಾಸಕರಿಂದ ಪೂಜೆ ಸಲ್ಲಿಕೆ

ಮಂಡ್ಯ : ಕೃಷ್ಣರಾಜಸಾಗರ ಅಣೆಕಟ್ಟೆಯ ಬೃಂದಾವನದಲ್ಲಿನ ಕಾವೇರಿ ಪ್ರತಿಮೆಯ ಮಂಭಾಗದಲ್ಲಿ ಅಣೆಕಟ್ಟೆಗೆ ದೃಷ್ಠಿಯಾಗಿದೆ ಎಂದು ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕ ರವೀಂದ್ರ ಶ್ರೀಕಂಠಯ್ಯ ನೇತೃತ್ವದಲ್ಲಿ ಆಷಾಡ ಸೋಮವಾರದಂದು ದೃಷ್ಠಿ ನಿವಾರಣ ಹೋಮ ಮತ್ತು ಕುಂಬಳಕಾಯಿ ಒಡೆದು ದೃಷ್ಠಿ ನಿವಾರಣೆ ಮಾಡಿದರು.

ಬೃಂದಾವನದಲ್ಲಿರುವ ಕಾವೇರಿ ಪ್ರತಿಮೆ ಮುಂಭಾಗದಲ್ಲಿ ಹೋಮಕುಂಡ ಸ್ಥಾಪಿಸಿ ಪೂಜೆ ಸಲ್ಲಿಸಲಾಯಿತು.

ಮಂಡ್ಯ ಜಿಲ್ಲೆಯ ಐವರು ಶಾಸಕರಾದ ಸಿ.ಎಸ್.ಪುಟ್ಟರಾಜು, ಎ.ಎಸ್.ರವೀಂದ್ರ ಶ್ರೀಕಂಠಯ್ಯ, ಸುರೇಶ್ ಗೌಡ, ಎಂ.ಶ್ರೀನಿವಾಸ್, ಡಾ.ಅನ್ನದಾನಿ, ಎಂ.ಎಲ್.ಸಿಗಳಾದ ಶ್ರೀಕಂಠೇಗೌಡ, ಅಪ್ಪಾಜಿಗೌಡ ಭಾಗವಹಿಸಿದ ಕಾರ್ಯಕ್ರಮ ಸುಮಾರು 2 ಘಂಟೆಗಳ ಕಾಲ ಪೂಜೆ, ಅಭಿಷೇಕ ಮತ್ತು ಹೋಮಕಾರ್ಯಗಳು ನಡೆದವು.

ಮೊದಲಿಗೆ ಗಣಪತಿ ಪೂಜೆ, ಸಂಕಲ್ಪ, ದೇವರ ಕಳಸಗಳ ಸ್ಥಾಪನೆ ಮಾಡಿದ ನಂತರ ಕಾವೇರಿ ಮಾತೆಯ ಪ್ರತಿಮೆಗೆ ಪಂಚಾಮೃತ ಅಭಿಷೇಕ ಮಾಡಲಾಯಿತು.

ನಂತರ ದುರ್ಗಾ, ಮೃತ್ಯಂಜಯ, ದೃಷ್ಠಿ ನಿವಾರಕ ಹೋಮಗಳನ್ನು ವೇದ ಬ್ರಹ್ಮ ಡಾ ಭಾನು ಪ್ರಕಾಶ್ ಶರ್ಮ ಮತ್ತು ಕೃಷ್ಣ ಭಟ್ ನೇತೃತ್ವದಲ್ಲಿ ನೆರವೇರಿಸಲಾಯಿತು.

ನಂತರ ಪೂರ್ಣಾಹುತಿಗೆ ಶಾಸಕರು ಪೂಜೆ ಸಲ್ಲಿಸಿದ ನಂತರ ಅಣೆಕಟ್ಟೆಗೆ ದೃಷ್ಠಿ ತೆಗೆದು ಕುಂಬಳಕಾಯಿಗಳನ್ನು ಶಾಸಕರು ಒಡೆದು ಪೂಜೆ ಸಂಪನ್ನಗೊಳಿಸಿದರು.

ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಕೃಷ್ಣರಾಜಸಾಗರ ಅಣೆಕಟ್ಟೆ ಕುರಿತು ಕೆಲವರು ಹೇಳಿಕೆ ಮತ್ತು ವಿಚಿತ್ರವಾದ ಮಾತುಗಳನ್ನು ಆಡಿದ್ದು, ಜನರಲ್ಲಿ ಭಯ ಉಂಟಾಗಿದೆ. ಕೆಲವು ಘಟನೆಗಳು ನಡೆದಿದೆ. ಇದರಿಂದ ಅಣೆಕಟ್ಟೆಗೆ ದೃಷ್ಠಿಯಾಗಿದೆ, ದೃಷ್ಠಿ ನಿವಾರಣೆಗೆ ದುರ್ಗಾ ಮಾತೆಗೆ ಹೋಮ ಮಾಡಿದ್ದೇವೆ, ಇದರಿಂದ ಅಣೆಕಟ್ಟೆಗೆ ದೃಷ್ಠಿ ನಿವಾರಣೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಕೆ.ಆರ್.ಸಾಗರ ಗ್ರಾ.ಪಂ ಅಧ್ಯಕ್ಷ ನಾಗೇಂದ್ರಕುಮಾರ್, ಶ್ರೀರಂಗಪಟ್ಟಣ ಪುರಸಭಾ ಉಪಾಧ್ಯಕ್ಷ ಪ್ರಕಾಶ್, ಜೆ.ಡಿ.ಎಸ್ ಮಂಡ್ಯ ಜಿಲ್ಲಾಧ್ಯಕ್ಷ ರಮೇಶ್, ಕೆ.ಆರ್.ಸಾಗರ ಗ್ರಾ.ಪಂ ಸದಸ್ಯರಾದ ಸಿ.ಮಂಜುನಾಥ್, ರವಿಕುಮಾರ್, ಮೀನು ರಾಜಣ್ಣ, ಪಾಪಣ್ಣ, ನರಸಿಂಹ, ಸ್ನೇಕ್ ದೀಪು, ಮೂರ್ತಿ, ಪಂಕಜ, ಸರಸ್ವತಿ, ಜಯಂತಿ, ಮುಖಂಡರಾದ ಹೆಚ್.ಎ.ವಿಜಯಕುಮಾರ್, ಪ್ರಕಾಶ್, ಗ್ರಾ.ಪಂ ಮಾಜಿ ಅಧ್ಯಕ್ಷ ಎಂ.ಬಿ.ಕುಮಾರ್ ಮಂಜುನಾಥ್, ಹರೀಶ್, ಮನು ಸೇರಿದಂತೆ ಇತರರು ಇದ್ದರು.

ಸಂವಿಧಾನ ವಿರೋಧಿ

ಕನ್ನಂಬಾಡಿ ಕಟ್ಟೆಯಲ್ಲಿ ಹೋಮಕುಂಡ ಸ್ಥಾಪನೆ ಮಾಡಿ ದೃಷ್ಠಿ ದೋಷ ನಿವಾರಣೆಗಾಗಿ ಶಾಸಕರು ಮಾಡಿರುವ ಪೂಜೆ ಸಂವಿಧಾನ ವಿರೋಧಿಯಾಗಿದೆ. ಜನತೆಗೆ ತಪ್ಪು ಸಂದೇಶವನ್ನು ನೀಡುತ್ತಿದ್ದಾರೆ. ಕಲಂ 51ಎಎಚ್ ಸ್ಪಷ್ಟವಾಗಿ ಹೇಳುತ್ತದೆ ಈ ಕ್ರಮ ಖಂಡನೀಯ. ಜನರಿಂದ ಆಯ್ಕೆಯಾದ ಶಾಸಕರು ಜನವಿರೋಧಿ ನೀತಿಯನ್ನು ಅನುಸರಿಸುತ್ತಿದ್ದಾರೆ. ಯಾರಿಂದ ದೃಷ್ಠಿ ದೋಷವಾಗಿದೆ ಎಂಬುದನ್ನು ಪೂಜೆ ಮಾಡಿದ ಮಂದಿ ಸ್ಪಷ್ಟಪಡಿಸಬೇಕು. ಇದು ನಾಚಿಕೇಗೇಡಿನ ಸಂಗತಿ. ನಾಲಾಯಕ್ ಕೆಲಸವನ್ನು ಶಾಸಕರು ಮಾಡಿದ್ದಾರೆ.

-ಎಚ್.ವಿಶ್ವನಾಥ್, ವಕೀಲರು.

ಮಂಡ್ಯದಲ್ಲಿ ಕಾರ್ಗಿಲ್ ವಿಜಯೋತ್ಸವ

ಮಾಜಿ ಸೈನಿಕರಿಗೆ ಹಾಗೂ ಸಾಧಕರಿಗೆ ಸನ್ಮಾನ

ಮಂಡ್ಯ ಜಿಲ್ಲಾ ಮಾಜಿ ಸೈನಿಕರ ಸಂಘ(ರಿ.)
ಮಂಡ್ಯ ಜಿಲ್ಲಾ ಮಾಜಿ ಸೈನಿಕರ ಕ್ಷೇಮಾ... ಟ್ರಸ್ಟ್(ರಿ.)
ಜೀವಧಾರೆ ಟ್ರಸ್ಟ್
ಇವರ ಸಹಯೋ...

ಮಂಡ್ಯ : ಮಂಡ್ಯ ಜಿಲ್ಲಾ ಮಾಜಿ ಸೈನಿಕರ ಸಂಘ, ಮಂಡ್ಯ ಜಿಲ್ಲಾ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಟ್ರಸ್ಟ್, ಮಂಡ್ಯ ಜೀವಧಾರೆ ಟ್ರಸ್ಟ್ ಇವರ ಸಹಯೋಗದಲ್ಲಿ 23ನೇ ಕಾರ್ಗಿಲ್ ವಿಜಯೋತ್ಸವದ ಕಾರ್ಯಕ್ರಮ ಮಂಡ್ಯ ಜಿಲ್ಲಾ ಮಾಜಿ ಸೈನಿಕರ ಸಂಘದ ಆವರಣದಲ್ಲಿ ನಡೆಯಿತು.

ಅಪಾರ ಜಿಲ್ಲಾಧಿಕಾರಿ ವಿ.ಆರ್.ಶೈಲಜಾ ರವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ದೇಶ ಕಾಯುವಂತಹ ದೊಡ್ಡ ಹುದ್ದೆ ಸೈನಿಕ ಹುದ್ದೆಯಾಗಿದೆ. ಸ್ವಾತಂತ್ರ್ಯ, ಸಮಾನತೆ, ಭಾತೃತ್ವವನ್ನು ಅನುಭವಿಸುತ್ತಿದ್ದೀವಿ ಎಂದರೆ, ಅದಕ್ಕೆ ಕಾರಣರು ದೇಶ ಕಾಯುವ ವೀರ ಯೋಧರು ಎಂದು ಬಣ್ಣಿಸಿದರು.

ನಗರಸಭಾಅಧ್ಯಕ್ಷರಾದ ಹೆಚ್.ಎಸ್.ಮಂಜು ಮಾಜಿ ಸೈನಿಕರಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಆತ್ಮೀಯವಾಗಿ ಸನ್ಮಾನಿಸಿದರು.

ಕಾಶ್ಮೀರದ ಗಡಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಅಕ್ರಮವಾಗಿ ನುಸುಳಿ, ಬೀಡುಬಿಟ್ಟಿದ್ದ, ಉಗ್ರರನ್ನು ಹಾಗೂ ಅವರ ಬೆಂಬಲಿಗರಾಗಿ ನಿಂತಿದ್ದ, ಪಾಕಿಸ್ತಾನದ ಸೇನಾ ಪಾತಕಿಗಳನ್ನು ಹಿಮ್ಮೆಟ್ಟಿಸಿದ ರಣತಂತ್ರ ಕಾರ್ಯಾಚರಣೆಯೇ ಇದಾಗಿದೆ. ಇದರಲ್ಲಿ ಯೋಧರ ತ್ಯಾಗ ಬಲಿದಾನಗಳನ್ನು ಸ್ಮರಿಸುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ವೇದಿಕೆಯಲ್ಲಿ ಮೇಜರ್ ಅಶ್ವಥ್ ಕುಮಾರ್, ಕೆ.ಎಂ. ಉದಯ್‌ಗೌಡ, ಡಾ. ಶಂಕರೇಗೌಡ, ಮಧು ಚಂದನ್, ಶವಲಿಂಗು, ನಟರಾಜ್, ಮಾಜಿ ಸೈನಿಕರು ಹಾಗೂ ಜೀವಾದರೆ ಟ್ರಸ್ಟ್‌ನ ಸದಸ್ಯರು ಹಾಜರಿದ್ದರು.

ಇದಕ್ಕೂ ಮುನ್ನ ಮಾಜಿ ಸೈನಿಕರು ಹಾಗೂ ದೇಶಾಭಿಮಾನಿಗಳು ನಗರಾದ್ಯಂತ ಘೋಷಣೆಗಳನ್ನು ಕೂಗಿ, ಬೈಕ್ ಜಾಥಾ ನಡೆಸಿ, ಕಾರ್ಗಿಲ್ ವೀರಯೋಧ ಸುಧೀರ್ ಹಾಗೂ ಶರತ್ ರವರ ಸಮಾಧಿ ಬಳಿ ಎಎಸ್‌ಪಿ ಧನಂಜಯ ನೇತೃತ್ವದಲ್ಲಿ ಪುಷ್ಪ ನಮನ ಸಲ್ಲಿಸಿ, ಗೌರವ ವಂದನೆಯನ್ನು ಸಲ್ಲಿಸಿದರು.

MANDYA DISTRICT
2

ಮಂಡ್ಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಎರಡು ವರ್ಷ ಪೂರೈಸಿದ ರಾಜ್ಯ ಸರ್ಕಾರದ ಸಾಧನೆಗಳ ಕುರಿತ ಕಿರುಹೊತ್ತಿಗೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಹೊರತಂದಿರುವ ಜಿಲ್ಲಾ ಮಟ್ಟದ ಸಾಧನಾ ಕಿರುಹೊತ್ತಿಗೆಯನ್ನು ಜಿಲ್ಲಾಧಿಕಾರಿ ಎಸ್.ಅಶ್ವತಿರವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ವಿ.ಆರ್.ಶೈಲಜಾ, ವಾರ್ತಾಧಿಕಾರಿ ಟಿ.ಕೆ ಹರೀಶ್ ಉಪಸ್ಥಿತರಿದ್ದರು.

ಪದವಿ ತರಗತಿ ಆರಂಭಿಸಲು ಸಿದ್ಧತೆ

ಮಂಡ್ಯ : ಸರ್ಕಾರ ಪದವಿ ವಿದ್ಯಾರ್ಥಿಗಳಿಗೆ ತರಗತಿ ಪ್ರಾರಂಭಿಸುವಂತೆ ಸೂಚನೆ ನೀಡಿದ್ದು, ಅದರಂತೆ ಎಲ್ಲ ಸಿದ್ದತೆಯನ್ನೂ ನಡೆಸಲಾಗಿದೆ ಎಂದು ಮಂಡ್ಯ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪುಟ್ಟರಾಜು ತಿಳಿಸಿದರು.

ಆ.2ರಂದು ಕಾಲೇಜಿನ ಆವರಣದಲ್ಲಿ ಪದವಿ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ನಿರ್ಧರಿಸಿದ್ದು, ಈ ಹಿನ್ನೆಲೆಯಲ್ಲಿ ಕಾಲೇಜಿನ ಎಲ್ಲಾ ಕೊಠಡಿಗಳಿಗೂ ಸ್ಯಾನಿಟೈಜರ್ ಸಿಂಪಡಣೆ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಕ್ಕಳಿಗೆ ಬೌದ್ಧಿಕ ಆನ್‌ಲೈನ್ ತರಗತಿ ಈಗಾಗಲೇ ಪ್ರಾರಂಭಿಸಲಾಗಿದೆ. ಶೇ.80ರಷ್ಟು ಮಕ್ಕಳು ಲಸಿಕೆ ಪಡೆದಿದ್ದಾರೆ. ಶೇ.90ರಷ್ಟು ಮಂದಿ ಸಿಬ್ಬಂದಿಗಳೂ ಸಹ 2ನೇ ಡೋಸ್ ಲಸಿಕೆ ಪಡೆದಿದ್ದಾರೆ. ಇನ್ನು ಯಾರ‍್ಯಾರು ಲಸಿಕೆ ಪಡೆದಿಲ್ಲ ಅಂತವರನ್ನು ಗುರುತಿಸಿ ಲಸಿಕೆ ಕೊಡಿಸಲು ಕ್ರಮ ವಹಿಸಲಾಗುವುದು. ಕೊರೋನಾ ಬಗ್ಗೆ ಮಕ್ಕಳಿಗೆ ಭಯ ಇಲ್ಲ. ಆತ್ಮಸ್ಥೈಯ ಇದೆ. ಆದರೂ ಮುಂಜಾಗ್ರತಾ ಕ್ರಮವಾಗಿ ಸ್ಯಾನಿಟೈಸರ್ ಸಿಂಪಡಿಸಲಾಗುತ್ತಿದೆ. ಮಾಸ್ಕ್, ಸಾಮಾಜಿಕ ಅಂತರ ಕಡ್ಡಾಯ ಕಾಪಾಡಲು ಸೂಚಿಸಲಾಗಿದೆ ಎಂದರು.

ವೈಜ್ಞಾನಿಕ ಬೆಲೆಯಿಂದ ರೈತನ ಉತ್ಪನ್ನಗಳು ವಂಚಿತ

ಭಾರತೀಯ ಕಿಸಾನ್ ಸಂಘದ ತಾಲ್ಲೂಕು ಘಟಕ ಉದ್ಘಾಟನೆ

ಮಂಡ್ಯ : ವ್ಯಾಪಾರೋದ್ಯಮದ ವ್ಯವಸ್ಥಿತ ಹುನ್ನಾರದಿಂದಾಗಿ ರೈತನ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗದಂತಾಗಿದೆ ಎಂದು ಭಾರತೀಯ ಕಿಸಾನ್ ಸಂಘದ ದಕ್ಷಿಣ ಪ್ರಾಂತ ಅಧ್ಯಕ್ಷ ರಾಜೇಂದ್ರ ವಿಷಾದಿಸಿದರು.

ಭಾರತೀಯ ಕಿಸಾನ್ ಸಂಘದ ಜಿಲ್ಲಾ ಘಟಕದ ವತಿಯಿಂದ ನಡೆದ ತಾಲೂಕು ಘಟಕಗಳ ರಚನೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ತೆಂಗಿಗೆ ಬೆಲೆ ಇಲ್ಲದಿದ್ದಾಗ ತಮಿಳುನಾಡಿನಲ್ಲಿ ದೊಡ್ಡ ಸಮಾವೇಶ ನಡೆಸಿ ಅದಕ್ಕೆ ಬೆಲೆ ಬರುವ ರೀತಿ ಮಾಡಲಾಗಿತ್ತು. ದೆಹಲಿಯಲ್ಲಿ ಒಂದು ತೆಂಗಿನ ಕಾಯಿಗೆ 100 ರೂ. ಇದೆ. ಆದರೆ ರೈತ ಬೆಳೆದು ಮಾರುಕಟ್ಟೆಗೆ ಸರಬರಾಜು ಮಾಡಿದರೆ ಅವನಿಗೆ ಕೇವಲ 8 ರಿಂದ 10 ರೂ. ಮಾತ್ರ ದೊರೆಯುತ್ತೆ. ಈ ವಿಚಾರ ಆಳುವ ಜನಪ್ರತಿನಿಧಿಗಳು, ವಿಜ್ಞಾನಿಗಳು, ಕೃಷಿ ತಜ್ಞರು, ಮಾರುಕಟ್ಟೆಗೆ ವಿಶ್ಲೇಷಕರಿಗೆ ತಿಳಿದಾಗ ಮಾತ್ರ ಇದಕ್ಕೆ ತಾತ್ವಿಕ ರೂಪ ದೊರೆಯಲು ಸಾಧ್ಯ ಎಂದು ಅಭಿಪ್ರಾಯಿಸಿದರು.

ಕಿಸಾನ್ ಸಮ್ಮಾನ್ ಯೋಜನೆ ಮೂಲಕ ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರೆಯುವಂತಾಯಿತು. ಜೊತೆಗೆ ದೊಡ್ಡ ದೊಡ್ಡ ಅಣೆಕಟ್ಟೆಗಳ ನಿರ್ಮಾಣವಾಗಿತ್ತು. ಆ ಮೂಲಕ ರೈತನ ನೀರಿನ ಬವಣೆ ನೀಗುವಂತಾಯಿತು. ಹನಿ ನೀರಾವರಿ ಪದ್ಧತಿ ಸೇರಿದಂತೆ ವೈಜ್ಞಾನಿಕ ಕೃಷಿ ಪದ್ಧತಿಗಳು ಕಾಲಿಟ್ಟವು ಎಂದು ಉದಾಹರಣೆ ಸಮೇತ ವಿವರಿಸಿದರು.

ರೈತನ ಎಲ್ಲ ಸಮಸ್ಯೆಗಳೂ ಬಗೆಹರಿಯಬೇಕೆಂದಾದರೆ ದೊಡ್ಡ ಸಂಘಟನೆಯಾಗಿ ಹೊರ ಹೊಮ್ಮಿರುವ ಭಾರತೀಯ ಕಿಸಾನ್ ಸಂಘವನ್ನು ಹೆಚ್ಚು ಶಕ್ತಿಯುತವಾಗಿ ಬೆಳೆಸಬೇಕಾಗಿದೆ. ಕೆಇಬಿಯಲ್ಲಿ ಟಿಸಿ ಬದಲಿಸಬೇಕಾದರೆ ಲಂಚ ಕೊಡಬೇಕಾಗಿತ್ತು. ಆದರೆ ಕಾನೂನು ಜ್ಞಾನ ಹೊಂದಿರುವ ಕಿಸಾನ್ ಸಂಘಟನೆಯವರು ಒಂದು ದೂರು ಕೊಟ್ಟರೆ 72 ಗಂಟೆಗಳಲ್ಲಿ ಅದನ್ನು ಬದಲಿಸುವ ವ್ಯವಸ್ಥೆ ಆಗಿದೆ. ಪ್ರತೀ ಗ್ರಾಮಗಳಲ್ಲೂ ಗ್ರಾಮ ಸಮಿತಿ ರಚಿಸಿ, ಊರಿನ ಮುಂಭಾಗದಲ್ಲಿ ದೊಡ್ಡ ನಾಮಫಲಕನ್ನು ಅಳವಡಿಸಬೇಕು. ಆಗ ಅಧಿಕಾರಿಗಳು ಸ್ವಇಚ್ಛೆಯಿಂದ ರೈತನ ಕಾರ್ಯಗಳನ್ನು ಮಾಡುತ್ತಾರೆ ಎಂದು ಹೇಳಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ನಾರಾಯಣಸ್ವಾಮಿ ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ಹಲವಾರು ಜ್ವಲಂತ ಸಮಸ್ಯೆಗಳಿವೆ. ಹೋರಾಟದ ಕಿಚ್ಚು ಮಾಯವಾಗಿದೆ. ಹಿಂದೆಲ್ಲಾ ಮಂಡ್ಯದಿಂದಲೇ ಹೋರಾಟದ ರೂಪುರೇಷೆ ಸಿದ್ಧವಾಗುತ್ತಿತ್ತು. ಮಂಡ್ಯದಲ್ಲಿ ಚಳವಳಿ ಆರಂಭವಾಯಿತೆಂದರೆ ಇಡೀ ರಾಜ್ಯಾದ್ಯಂತ ಸಮಸ್ಯೆ ಇಟ್ಟುಕೊಂಡು ಹೋರಾಟಗಳು ನಡೆಯುತ್ತಿದ್ದವು. ಅದಕ್ಕೆ ಅದಕ್ಕೆ ನ್ಯಾಯ ಸಿಗುತ್ತಿತ್ತು. ಆದರೀಗ ಹೋರಾಟದ ಕಿಚ್ಚು ಕಮರಿಹೋಗಿದೆ. ಆ ಕಾರಣದಿಂದಾಗಿ 10 ವರ್ಷಗಳಿಂದಲೂ ಮೈಷುಗರ್ ನಿಂತುಹೋಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತನ ಬೆಳೆಗೆ ನಿಜವಾದ ವೈಜ್ಞಾನಿಕ ಬೆಲೆ ದೊರೆಯುಂತಾಗಬೇಕು. ಸರ್ಕಾರಿ ನೌಕರರ ವೇತನ ಹೆಚ್ಚುತ್ತಾ ಹೋಗುತ್ತದೆ. ಆದರೆ, ದೇಶಕ್ಕೆ ಅನ್ನ ನೀಡುವ ರೈತನ ಬದುಕು ಇನ್ನೂ ಪ್ರಗತಿಯಾಗಿಲ್ಲ. ದುರ್ಬಲವಾಗಿರುವ ರೈತನ ಬದುಕನ್ನು ಸರಿದಾರಿಗೆ ತರಲು ಭಾರತೀಯ ಕಿಸಾನ್ ಸಂಘವನ್ನು ಗಟ್ಟಿಗೊಳಿಸುವ ಅಗತ್ಯತೆ ಇದೆ. ಆ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾಗಿದೆ. ಹೋರಾಟದಿಂದಲೇ ಎಲ್ಲವನ್ನೂ ಸಾಧಿಸಿಕೊಳ್ಳಬೇಕು. ಜಡ್ಡು ಹಿಡಿದಿರು ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸಲು ಹೋರಾಟವೇ ಅಸ ಎಂದು ಹೇಳಿದರು.

ಭಾರತೀಯ ಕಿಸಾನ್ ಸಂಘದಲ್ಲಿ ಜಾತಿ, ಧರ್ಮ, ಪಕ್ಷ ಯಾವುದೇ ಸಂಕೋಲೆಯೂ ಇಲ್ಲ. ಇಲ್ಲಿ ಎಲ್ಲರೂ ರೈತರೇ ಆಗಿರುತ್ತಾರೆ. ರೈತನ ಸಮಸ್ಯೆ ಬಗೆಹರಿಯಬೇಕು. ರೈತ ಸುಖೀ ಜೀವನ ನಡೆಸಬೇಕು. ಆ ಮೂಲಕ ದೇಶಕ್ಕೆ ಅನ್ನ ನೀಡುವ ಕೆಲಸವನ್ನು ನಿರಂತರವಾಗಿ ಮಾಡಬೇಕು. ಈ ನಿಟ್ಟಿನಲ್ಲಿ ಎಲ್ಲ ರೈತರು ಕಾರ್ಯೋನ್ಮುಖವಾಗಬೇಕಿದೆ ಎಂದು ತಿಳಿಸಿದರು.

ಜೈವಿಕ ಪ್ರಮುಖ್ ರಮೇಶರಾಜು, ಜಿಲ್ಲಾಧ್ಯಕ್ಷ ದೊಡ್ಡಲಿಂಗೇಗೌಡ, ಮಾಜಿ ಅಧ್ಯಕ್ಷ ಶಿವರಾಮೇಗೌಡ, ಕಾರ್ಯಕಾರಿಣಿ ಸದಸ್ಯರಾದ ವೆಂಕಟೇಶ್, ದೊಡ್ಡಲಿಂಗಯ್ಯ, ಸುರೇಶ್ ಇದ್ದರು.

ಆರೋಗ್ಯ ವಿವಿ ಕುಲಸಚಿವರಿಗೆ ಅಭಿನಂದನೆ

ಮಂಡ್ಯ : ಭಾರತೀಯ ದಂತ ವೈದ್ಯಕೀಯ ಸಂಘದ ಜಿಲ್ಲಾ ಶಾಖೆ ವತಿಯಿಂದ ನಗರದ ನೂರಡಿ ರಸ್ತೆಯಲ್ಲಿರುವ ಸುಮನಾ ಸಭಾಂಗಣದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಕುಲಸಚಿವ ಡಾ. ಶಿವಕುಮಾರ್ ಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಜಿಲ್ಲಾದಂತ ನೋಡಲ್ ಅಧಿಕಾರಿ ಡಾ.ಎಚ್.ಅರ್. ಅರುಣಾನಂದ ಮಾತನಾಡಿ, ಮಂಡ್ಯ ಎಂದರೆ ಇಂಡಿಯಾ ಇದ್ದಂತೆ ಮಂಡ್ಯದ ಹಲವಾರು ಮಂದಿ ಬೇರೆ ಬೇರೆ ಸ್ಥಳದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಅದೇ ರೀತಿ ಡಾ.ಶಿವಕುಮಾರ್‌ಸ್ವಾಮಿ ಅವರು ಸಹ ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿ.ವಿ.ಯಲ್ಲಿ ಕುಲಸಚಿವರಾಗಿ ಕೆಲಸ ಮಾಡುತ್ತಾ ಮಂಡ್ಯದ ಸದ್ದನ್ನು ಮೊಳಗಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಡಾ.ಶಿವಕುಮಾರಸ್ವಾಮಿ ಅವರು ಕಾನೂನು ವ್ಯಾಪ್ತಿಯಲ್ಲಿ ಏನೆಲ್ಲಾ ಮಾಡಬಹುದೋ ಅದನ್ನೇ ಮಾಡುತ್ತಾರೆ. ಕಾನೂನು ಚೌಕಟ್ಟು ಬಿಟ್ಟು ಬೇರೆ ಏನೂ ಸಹ ಮಾಡುವುದಿಲ್ಲ. ಇಂತಹ ನೇರ ವ್ಯಕ್ತಿತ್ವ ಹೊಂದಿರುವ ಅವರು ರಾಜೀವ್‌ಗಾಂಧಿ ವಿ.ವಿಯಲ್ಲಿ ಕೆಲಸ ಮಾಡುತ್ತಿರುವುದು ಜಿಲ್ಲೆಗೆ ಗೌರವ ತಂದಿದೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ಡಾ. ರೂಪಾ ಧರ್ಮೇಂದ್ರ, ಕಾರ್ಯದರ್ಶಿ ಡಾ.ಪ್ರತಿಮಾ, ಖಜಾಂಚಿ ಡಾ.ಕೃಪಾ ಸಂತೋಷ್, ಹಿರಿಯ ವೈದ್ಯರಾದ ಡಾ. ಆವಂತಿ ಚಂದ್ರಶೇಖರ್, ಡಾ. ಸುಕನ್ಯಾ ನಾಗರಾಜು, ಡಾ. ಅನುಪಮಾ, ಡಾ.ಚಂದ್ರಶೇಖರ್, ಡಾ.ನಿಸರ್ಗ, ಡಾ.ಪ್ರತಿಭಾ, ಡಾ.ಪೂರ್ಣಿಮಾ, ಡಾ.ಸಂತೋಷ್ ಇದ್ದರು.